ಸದನದಲ್ಲಿ ಉತ್ತರಿಸುವ ಪ್ರಶ್ನೆ

# ಕರ್ನಾಟಕ ವಿಧಾನ ಪರಿಷತ್ತು

## ನೂರ ಮೂವತ್ತೆಂಟನೆಯ ಅಧಿವೇಶನ

## ಗುರುವಾರ, ದಿನಾಂಕ: 18ನೇ ಜುಲೈ, 2019

ಹೊಸ ಪಿಂಚಣಿ ಎನ್.ಪಿ.ಎಸ್. ವ್ಯವಸ್ಥೆಯನ್ನು ರದ್ದುಪಡಿಸುವ ಭರವಸೆ ಬಗ್ಗೆ

ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ) -

60 (404) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ-

(ಅ) ಮಾನ್ಯ ಮುಖ್ಯಮಂತ್ರಿಗಳು ಹೊಸ ಪಿಂಚಣಿ ವ್ಯವಸ್ಥೆಯನ್ನು (ಎನ್.ಪಿ.ಎಸ್.) ರದ್ದುಪಡಿಸುವ ಭರವಸೆಯನ್ನು ರಾಜ್ಯದ ನೌಕರರಿಗೆ ನೀಡಿರುವುದು ನಿಜವೇ; ಹಾಗಿದ್ದಲ್ಲಿ ಯಾವಾಗ ರದ್ದುಪಡಿಸಿ ಹಳೆಯ ಪದ್ಧತಿಯನ್ನು ಜಾರಿಗೆ ತರಲಾಗುವುದು ;

(ಆ) ಹೊಸ ಪಿಂಚಣಿ ವ್ಯವಸ್ಥೆಯನ್ನು ರದ್ದುಪಡಿಸುವ ದೃಷ್ಟಿಯಿಂದ ಬೆಳಗಾವಿ ಅಧಿವೇಶನದಲ್ಲಿ ಸರ್ಕಾರ ಅಧ್ಯಯನ ಸಮಿತಿಯನ್ನು ರಚಿಸಿರುವುದು ನಿಜವೇ; ಹಾಗಿದ್ದಲ್ಲಿ, ಸಮಿತಿಯ ವಿವರವಾದ ಮಾಹಿತಿ ನೀಡುವುದು ;

(ಇ) ಈ ಸಮಿತಿ ಕಾರ್ಯಾರಂಭ ಮಾಡಿದೆಯೇ ; ಎಷ್ಟು ಭಾರಿ ಸಭೆ ಸೇರಿ ವಿಷಯವನ್ನು ಪರ್ಯಾಲೋಚಿಸಿದೆ ; (ಮಾಹಿತಿ ನೀಡುವುದು)

(ಈ) ಅಂತಿಮ ವರದಿಯನ್ನು ಸರ್ಕಾರಕ್ಕೆ ಯಾವಾಗ ಸಲ್ಲಿಸಲಾಗುವುದು ?